ಒಎಸ್.ನಂ.12/2024
ಪಿಡಬ್ಲ್ಯೂ : 01

ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ: 28.11.2025.

**ಮುಂದುವರೆದ ಪಾಟೀ ಸವಾಲು: ಶ್ರೀ ಡಿ.ಹೆಚ್.ಹೆಚ್. ವಕೀಲರಿಂದ ಪ್ರದಿವಾದಿ ಪರ:-**

ರಾಜಶೇಖರ ಪಾಟೀಲ್ ನನ್ನ ಗಂಡನ ದೂರಿನ ಸಂಬಂಧಿಕನಾಗಬೇಕು. ಪ್ರತಿವಾದಿಯ ತಂದೆಗೆ ಎಷ್ಟು ಜನ ಅಕ್ಕ-ತಂಗಿಯರು ಇದ್ದಾರೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ತಂದೆಗೆ ಮೂರು ಜನ ಸಹೋದರಿಯರು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಪ್ರತಿವಾದಿಗೆ ಅವರ ಹಿರಿಯರಿಂದ ಬಂದ ಸ್ವತ್ತು ಎಂದರೆ ಸಾಕ್ಷಿ ಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕ್ರಯ ಕರಾರನ್ನು ಮಾಡಿಕೊಳ್ಳುವಾಗ ದಾವ ಸ್ವತ್ತು ಪ್ರತಿವಾದಿಗೆ ಹೇಗೆ ಬಂದು ಎಂದು ನಾನು ವಿಚಾರಣೆ ಮಾಡಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿಯು ದಾವಾ ಸ್ವತ್ತು ತನಗೆ ಸೇರಿದೆ ಎಂದು ನನಗೆ ತಿಳಿಸಿದ್ದಾನೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಯ ತಂದೆಯ ಸಹೋದರಿಯರಿಗೆ ಹಿಸ್ಸೆ ಇದೆ ಎಂದರೆ ಸಾಕ್ಷಿಯು ಪ್ರತಿವಾದಿಯು ನನಗೆ ತಿಳಿಸಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯು ಯಾವ ಕಾರಣಕ್ಕಾಗಿ ದಾವಾ ಸ್ವತ್ತುನ್ನು ಮಾರಾಟ ಮಾಡಲು ನಿರ್ಧರಿಸಿದ ಎಂಬ ಪ್ರಶ್ನೆಗೆ ಸಾಕ್ಷಿಯು ಪ್ರತಿವಾದಿಯು ಯಾವ ಕಾರಣಕ್ಕಾಗಿ ಮಾರಾಟ ಮಾಡಿದ್ದಾನೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ಯಾವ ಕಾರಣಕ್ಕಾಗಿ ದಾವಾ ಸ್ವತ್ತುನ್ನು ಮಾರಾಟ ಮಾಡಲು ಒಪ್ಪಿದ ಒಂದು ವಾದ ಪತ್ರದಲ್ಲಿ ನಮೂದು ಮಾಡಿದ್ದೇನೇಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಅವರ ಮನೆಯಲ್ಲಿ ಮದುವೆ ಇರುವುದರಿಂದ ಮಾರಾಟ ಮಾಡಲು ನಿರ್ಧರಿಸಿದ ಎಂದು ನುಡಿಯುುತ್ತಾರೆ. ಸದರಿ ಮದುವೆಗೆ ನಮಗೆ ಆಮಂತ್ರಣ ನೀಡಿಲ್ಲ, ಆದರೆ ತಮ್ಮ ಮನೆಯ ಕಾರ್ಯಕ್ರಮಗಳು ಹಾಗೂ ಅಡಚಣೆಗಾಗಿ ದಾವಾ ಸ್ವತ್ತುನ್ನು ಮಾರಾಟ ಮಾಡುವ ಅವಶ್ಯಕತೆ ಇದೆ ಎಂದು ಪ್ರತಿವಾದಿಯು ತಿಳಿಸಿದ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಮಾರಾಟ ಮೂರು ದಿನಗಳ ನಂತರ ಮುಂಗಡ ಹಣವನ್ನು ನೀಡಿರುತ್ತೇವೆ. ನಾವು ಒಟ್ಟು ಮೂರು ಕಂತಿನಲ್ಲಿ ಹಣವನ್ನು ನೀಡಿರುತ್ತೇವೆ. ಮೂದಲನೆ ಬಾರಿ ಹವಣನ್ನು 2021ನೇ ಸಾಲಿನಲ್ಲಿ ನೀಡಿದ್ದು, ಕೊನೆಯ ಬಾರಿ ಸಬ್ ರಜೀಸ್ಟರ್ ಕಛೇರಿಯಲ್ಲಿ ದಾಖಲೆ ನೋಂದಣಿಯಾಗುವಾಗ ನೀಡಿದ್ದೇವೆ ಎಂದು ನುಡಿಯುತ್ತಾರೆ. ಸದರಿ ಹಣವನ್ನು ನಗದಾಗಿ ನೀಡಿರುತ್ತೇವೆ. ನನ್ನ ಗಂಡನ ತಂದೆಯ ಜಮೀನು ಮಾರಾಟ ಮಾಡಿ ಬಂದ ಹಣದಿಂದ ಮುಂಗಡ ಹಣ ನೀಡಿರುತ್ತೇವೆ. ಸದರಿ ಜಮೀನಿನ ಸರ್ವೆ ನಂಬರ ನನ್ನ ಗಂಡನಿಗೆ ಗೊತ್ತು. ಸದರಿ ಜಮೀನಿನ ಮಾರಾಟದ ದಾಖಲೆಗಳು ಹಾಜರು ಮಾಡಿಲ್ಲ. ಪ್ರತಿವಾದಿಯ ಅಣ್ಣನಾದ ಶಶಾಂಕ ನನ್ನ ಬಳಿ ಆಗಾಗ ಹಣ ಪಡೆಯುತ್ತಿದ್ದನು. ಸದರಿಯವರು ಆಗಾಗ ರೂ.30,000/-, ರೂ.40,000/- ರಂತೆ ಹಣವನ್ನು ಪಡೆದು ಮರಳಿ ನೀಡುತ್ತಿದ್ದರು. ಸದರಿ ವ್ಯವಹಾರದ ದಾಖಲೆಗಳನ್ನು ಹಾಜರು ಮಾಡಿಲ್ಲ.

ಸದರಿಯವರು ನನ್ನಿಂದ ಒಟ್ಟು ಎಷ್ಟು ಹಣವನ್ನು ಪಡೆದಿದ್ದಾರೆ ನನ್ನಿಂದ ಹೇಳಲು ಆಗುವುದಿಲ್ಲ. ನಾನು ಬಡ್ಡಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ಬಡ್ಡಿ ವ್ಯವಹಾರ ಮಾಡಲು ಪರವಾನಿಗೆ ಪಡೆದಿಲ್ಲ ಎಂದರೆ ಸಾಕ್ಷಿಯು ನಾನು ಬಡ್ಡಿ ವ್ಯವಹಾರ ಮಾಡುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯ ಸಹೋದರ ನನ್ನಿಂದ ಒಂದು ಬಾರಿ ರೂ.40,000/- ಮತ್ತೊಂದು ಬಾರಿ ರು.50,000/- ಸಾಲವನ್ನು ಪಡೆದಿದ್ದು, ಅದಕ್ಕಾಗಿ ನಾನು ಪ್ರತಿವಾದಿಗೆ ಹೆದರಿಸಿ ಕ್ರಯದ ಕರಾರನ್ನು ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಖಾತೆಯು ಪ್ರತಿವಾದಿಯ ಹೆಸರಿಗೆ ಇರುವುದರಿಂದ ಆತನನ್ನು ಹೆದರಿಸಿ ಕ್ರಯದ ಕರಾರನ್ನು ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನು ಕ್ರಯದ ಕರಾರು ಮಾಡುವ ದಿನದಂದು ಕಾಂಗ್ರೆಸ್ ಪಕ್ಷದ ಯಾವ ಪದವಿಯಲ್ಲಿ ಇದ್ದೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ನೆನಪು ಇಲ್ಲ, ಆದರೆ ಕಾಂಗ್ರೆಸ್ ಪಕ್ಷದಲ್ಲಿ ಕೆಲಸ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ಪ್ರಸ್ತುತ ದಾವೆ ಸಲ್ಲಿಸುವಾಗ ನಾನು ಯಾವುದೇ ಪದವಿಯಲ್ಲಿ ಇರಲಿಲ್ಲ. ನಾನು ಪ್ರತಿವಾದಿಗೆ ಕೊನೆಯ ಬಾರಿ ರೂ.1,36,000/- ಹಣವನ್ನು ನೀಡಿರುತ್ತೇನೆ. ಸದರಿ ಹಣವನ್ನು ಎಣಿಸಿ ನೀಡಿರುತ್ತೇನೆ. ಸದರಿ ಹಣವನ್ನು ನಾನು ಮತ್ತು ನನ್ನ ಗಂಡ ಎಣಿಸಿ ಪ್ರತಿವಾದಿಗೆ ನೀಡಿರುತ್ತೇವೆ. ಯಾವ ಮುಖ ಬೆಲೆಯ ನೋಟುಗಳು ಇದ್ದವು ನನಗೆ ನೆನಪು ಇಲ್ಲ. ನಾನು ಪ್ರತಿವಾದಿಗೆ ಯಾವುದೇ ಹಣವನ್ನು ನೀಡಿಲ್ಲ ನನಗೆ ಹಣ ನೀಡುವ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ನಾನು ಹಣ ನೀಡುವ ಸಾಮರ್ಥ್ಯ ಇದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸಾಕ್ಷಿಯು ನಮ್ಮ ಮಾವನಿಗೆ ಸೇರಿದ ಜಮೀನು ಮಾರಾಟ ಮಾಡಿದ ಹಣ ಇತ್ತು ಎಂದು ನುಡಿಯುತ್ತಾರೆ. ಪ್ರತಿವಾದಿ ಕುಟುಂಬಕ್ಕೆ ದಾವಾ ಸ್ವತ್ತು ಹೊರತುಪಡಿಸಿ ಬೇರೆ ಜಮೀನು ಇಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಕಾಂಗ್ರೆಸ್ ಪಕ್ಷದ ಧೂರಣೆಯಾಗಿದ್ದರಿಂದ ಕೆಲ ಪುಂಡರನ್ನು ಬಳಸಿಕೊಂಡು ಪ್ರತಿವಾಗೆ ಹೆದರಿಸಿ ಕ್ರಯದ ಕರಾರನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಬೆಲೆಯು ರೂ.30,00,000/- ಆಗುತ್ತದೆ ಎಂದರೆ ಸಾಕ್ಷಿಯು ನನಗೆ ಈಗಿನ ಬೆಲೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ನಾನು ಸುಳ್ಳು ಸಂಗತಿಗಳೊಂದಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇರುವುದಿಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

**ಪ್ರಭಾರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**